
ಮುಗಿದದ್ದು ಗೊತ್ತಾಗಲೇ ಇಲ್ಲ. ದಿಢೀರ್ ಸಾಂಸಾರಿಕ ಜೀವನ ಸಿಂಹಾಸನಪುರಿಯಲ್ಲಿ ಆರಂಭವಾಯಿತು. ಹೊಸ ಮನೆ, ಹೊಸ ಜನ, ಅವರನ್ನು ಮೆಚ್ಚಿಸು, ಇವರನ್ನು ಮೆಚ್ಚಿಸು. ನಮ್ಮ ಕಡೆ ಹಂಗೆ ನಿಮ್ಮ ಕಡೆ ಹಿಂಗೆ. ಅದು ಸರಿ ಇಲ್ಲ. ಇದು ಸರಿ ಇಲ್ಲ. ಕಾಫಿ ಕುಡಿ ಬ್ಯಾಡ, ಟೀ ಕುಡಿಬ್ಯಾಡ. ಇದರಲ್ಲೇ ಹನ್ನೆರಡು ವರ್ಷ ಕಳೆದು ಕೊರೋನ ಬಂತು. ಮಾಸ್ಕ್ ಬಂತು. ಲಾಕ್‌ಡೌನ್ ಆಯಿತು. ಆ ಕಡೆ ಹೋದವರು ಅಲ್ಲೇ, ಈ ಕಡೆ ಹೋದವರು ಇಲ್ಲೇ. ಹಾಲು ನೀರು ಹೋಗಲಿ ಮನೆಯಲ್ಲಿ ಮನುಷ್ಯರೇ ಇಲ್ಲ. ಹಗಲು ರಾತ್ರಿ ನಾನೊಬ್ಬಳೆ. ಒಂದು ತಿಂಗಳು ಕಳೆದ ಮೇಲೆ ಮಾಸ್ಕ್ ಹಾಕಿಕೊಂಡು ಏನಾದ್ರೂ ತರಬಹುದು ಅಂತ ಆದ ಮೇಲೆ ಸ್ವಲ್ಪ ಧೈರ್ಯ ಮಾಡಿ ವಾಕಿಂಗ್ ಹೋಗತೊಡಗಿದೆ. ಮೊದಮೊದಲು ಅಕ್ಕಪಕ್ಕದ ರೋಡ್ಗಳಲ್ಲೇ ಮನೆಗೆ ಹತ್ತಿರದಲ್ಲೇ



ವಾಕ್ ಮಾಡುತ್ತಿದ್ದೆ. ಅವತ್ತೊಂದಿನ ಯಾಕೋ ಸ್ವಲ್ಪ ದೂರ ಹೋಗೋಣ ಅನ್ನಿಸಿತು. ನಡೆಯುತ್ತಾ ನಡೆಯುತ್ತಾ ಮೈನ್ ರೋಡ್ ತಲುಪಿ ಎಡಕ್ಕೆ ತಿರುಗಿದೆ. ಎರಡು ನಿಮಿಷ ನಡೆದಿರಬಹುದು ಅಷ್ಟೆ. ಅಲ್ಲೊಂದು ದೊಡ್ಡ ಗೇಟು ಕಾಂಪೌಂಡ್ ಕಾಣಿಸಿತು. ಧ್ಯಾನಮಂದಿರ ಅಂತ ಬೋರ್ಡ್ ಹಾಕಿತ್ತು. ಸೆಕ್ಯುರಿಟಿ ಕುರ್ಚಿ ಮೇಲೆ ಕುಳಿತಿದ್ದರು. ನನ್ನನ್ನು ನೋಡಿ ಗೇಟ್ ತೆಗೆದರು. ಆದಂಗಾಗ್ಲಿ ಅಂದುಕೊಳ್ಳುತ್ತಾ ಹೋಗೇಬಿಟ್ಟೆ.

ಹೆಚ್ಚೂಕಡಿಮೆ ಒಂದು ಎಕರೆ ಜಾಗದಲ್ಲಿ ಗಿಡ ಮರಗಳು ತುಂಬಿವೆ. ಯೋಗಮಂದಿರ, ಧ್ಯಾನಮಂದಿರ, ಪುಟಾಣಿಕೊಳ ಹೀಗೆ ನೋಡುತ್ತಾ ಬಲಕ್ಕೆ ತಿರುಗಿದೆ. ಇದೆಂಥ ಮರ ಹಿಂಗಿದೆಯಲ್ಲಾ ಅಂತ ನೋಡುತ್ತೇನೆ – ಏನು ನೋಡುವುದು, ನಾನು ನೋಡುತ್ತಿರುವುದು ಆಲದ ಮರವನ್ನು, ನಿಂತಿರುವುದು ಆಲದ ಮರದ ಪಕ್ಕದಲ್ಲಿ. ಅಪ್ಪಾ ನನ್ನ ಸಂತೋಷಕ್ಕೆ ಪಾರವೇ ಇಲ್ಲ. ನಗಲಾ ಅಳಲಾ ಕುಣಿದಾಡಲಾ... ಗೊತ್ತಾಗಲಿಲ್ಲ. ಅಮ್ಮ ಅಣ್ಣಯ್ಯರು ಆಡಿದ ಮಾತೆಲ್ಲಾ ನೆನಪಾಗುತ್ತಿವೆ. ನಮ್ಮ ಸ್ಕೂಲು, ನನ್ನ ಹಾಡು ನೆನಪಾಗುತ್ತಿವೆ. ಪ್ರತೀ ದಿನ ದೇವರಿಗೆ ಕೈ ಮುಗಿಯುವುದನ್ನು ಮರೆತಿರಬಹುದು. ಆದರೆ ಆಲದ ಮರವೇ ಅಂತ ಹಾಡುವುದನ್ನು ನಾನು ಮರೆತಿರಲಿಲ್ಲ. ಪ್ರಯಾಸವೇ ಇಲ್ಲದೆ ಆಲದ ಮರ ಮನೆಗೆ ಬಹಳ ಹತ್ತಿರದಲ್ಲಿ ನನ್ನ ಕಣ್ಣಮುಂದೆ ಪ್ರತ್ಯಕ್ಷವಾದ ಅನುಭವವಾಯ್ತು. ಸ್ವಲ್ಪ ಹೊತ್ತು ಹಾಗೇ ನಿಂತು ನಂತರ ಯೋಗ ಮಂದಿರದ ಮೆಟ್ಟಿಲುಗಳ ಮೇಲೆ ಪೂರ್ವ ದಿಕ್ಕಿಗೆ ಮುಖಮಾಡಿ ಕುಳಿತೆ. ಬೆಳಗ್ಗಿನ ಏಳು ಗಂಟೆಯ ಸಮಯ. ಸೂರ್ಯೋದಯವಾಗಿದೆ. ಅದೊಂದು ಸೌಭಾಗ್ಯದ ಕ್ಷಣ. ಅಯೋಮಯ. ಹಕ್ಕಿಗಳ ಚಿಲಿಪಿಲಿ ಸ್ವರ್ಗದಲ್ಲಿ ತೇಲಾಡುವುದು ಎಂದರೆ ಹೀಗೇನಾ ಎನಿಸತೊಡಗಿತು. ನಯನ ಮನೋಹರ ದೃಶ್ಯ. ಚಿಗುರೆಲೆ, ಕೊಂಬೆರೆಂಬೆ, ಎಲೆಗುಂಪಲು ಕಾಂಡ ಕೊನೆಗಳಿಂದ ಇಳಿ ಬಿದ್ದ ಬಿಳಲುಗಳಿಂದ ಕೂಡಿದ ಸಮೃದ್ಧ ವೃಕ್ಷ. ದಿವ್ಯಮೌನಿ ಆಲದ ಮರ ಈಗ ನನ್ನ ಕಣ್ಮುಂದೆ.

ಆರು ವರ್ಷಗಳಿಂದ ಪ್ರತೀ ದಿನ ಆಲದ ಮರವನ್ನು ಹತ್ತಿರದಿಂದ ನೋಡುತ್ತಿದ್ದೇನೆ. ಎಷ್ಟೇ ಗಮನಿಸಿ ನೋಡಿದರೂ ಕಾಂಡದ ಲೆಕ್ಕ ತಪ್ಪುತ್ತಿತ್ತು. ಕೊನೆಗಳನ್ನು ಲೆಕ್ಕ ಮಾಡಿ ಗೆಲ್ಲುವ ಮಾತಂತೂ ಇಲ್ಲ. ಐವತ್ತು ಬಿಳಲುಗಳನ್ನು ಒಂದು ದಿನ ಲೆಕ್ಕಮಾಡಿದೆ. ಮರುದಿನ ಲೆಕ್ಕ ಮಾಡಿದಾಗ ಎಪ್ಪತ್ತು ಬಂತು. ನಾಳೆ ಹೇಗೂ ಬರ್ತಿನಲಾ ಸರಿಯಾಗಿ ಎಣಿಸುತ್ತೇನೆ ಅಂದುಕೊಳ್ಳುವುದಷ್ಟೆ, ಸಾಧ್ಯವಾಗಲೇ ಇಲ್ಲ. ಪ್ರತೀ ದಿನವೂ ಹೊಸ ಬಗೆಯಾಗಿ ಕಾಣುವ ಈ ಮರದ ವಯಸ್ಸು ಎಂಬತ್ತಕ್ಕೂ ಹೆಚ್ಚು. ಇನ್ನೂರು ಅಡಿ ಅಗಲ, ಇನ್ನೂರು ಅಡಿ ಉದ್ದ ಜಾಗದಲ್ಲಿ ವ್ಯಾಪಿಸಿ ನೋಡಲು ಬರುವವರಿಗೆ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ಬೆಳೆಯುವ ಮರವೇ ಇದು ಎಂಬ ಭಾವನೆಯನ್ನು ಮೂಡಿಸುತ್ತದೆ. ಎಲೆ ಉದುರುವುದು ಗೊತ್ತಾಗುವುದೇ ಇಲ್ಲ. ಸದಾ ಹಸಿರು. ದೂರದಿಂದ ಮಾವಿನ ಎಲೆಗಳನ್ನು ನೋಡಿದಂತಾಗುತ್ತದೆ. ಆದರೆ ಹಾಗಿಲ್ಲ. ಕೊನೆಗಳ ತುದಿಯಲ್ಲಿ ಕಾಯಿಗಳ ಗೊಂಚಲು ಅಸಂಖ್ಯಾತವಾಗಿರುತ್ತವೆ. ಹಣ್ಣುಗಳ ಬಣ್ಣ ಕೆಂಪು.

ಸೂರ್ಯಾಸ್ತಮಾನದ ವೈಭೋಗವನ್ನು ನೋಡಲು ಮಗಳೊಂದಿಗೆ ಬಂದು ಧ್ಯಾನಮಂದಿರದಲ್ಲಿ ಕುಳಿತಿದ್ದೇನೆ. ಸೂರ್ಯ ಮುಳುಗುವುದನ್ನೇ ನೋಡುತ್ತಾ 'ಅಮ್ಮ ನಾವು ಒಂದು ಆಲದ ಗಿಡ ನೆಡೋಣ?' ಅಂದ ಮಾತು ಸೆಕ್ಯುರಿಟಿಯಣ್ಣಗೆ ಕೇಳಿತು. ಅವರು ನೇರ ಬಂದು ನಮ್ಮ ಪಕ್ಕದಲ್ಲಿ ಕುಳಿತರು. 'ಆಲದ ಗಿಡ ಎಲ್ಲಿ ಸಿಗುತ್ತೆ ಅಣ್ಣ' ಅಂತ ಕೇಳಿದೆ. 'ಬೇಕಾ? ನಡ್ತಿರಾ? ಎಲ್ಲಿ ನಡ್ತಿರಿ? ಆಲ ಒಂದೇ ಯಾಕೆ, ಬೇರೆ ಬೇರೆ ತರದ ಗಿಡಗಳು ನನ್ನ ಹತ್ರ ಇದಾವೆ. ಬೇವು ಅರಳಿ ಸಂಪಿಗಿ ಹಲಸು, ನಾನೇ ಕಸಿ ಕಟ್ಟತ್ತೀನಿ. ನಿಮಗೆ ಯಾವ ಗಿಡ ಬೇಕು ಹೇಳಿ ಕೊಡ್ತಿನಿ. ಆದರೆ ಒಂದು ಕಂಡಿಷನ್. ಆ ಗಿಡನ ನೆಟ್ಟು ನೀರಾಕಿ ಪೋಷಣೆ ಮಾಡಿ ಉಳ್ಸಿ ಬೆಳ್ಸ್‌ಬೇಕು, ಆಗುತ್ತಾ ನಿಮ್ಮ ಹತ್ರ? ಮನೆ ಹತ್ರ ಜಾಗ ಇದಿಯಾ? ಯಾಕೆ ಕೇಳ್ತಾ ಇದೀನಿ ಅಂದ್ರೆ, ಗಿಡಮರ ಬೆಳೆಯೊರನ್ನ ಬುದ್ಧಿವಂತರನ್ನ ಬಹಳ ಜನ ನೋಡಿದಿನಿ. ಬೆಂಗಳೂರಲ್ಲಿ ಏಳು ಎಕರೇಲಿ ಒಂದ್ ಆಲದ ಮರ ಐತೆ. ಯೋಚನೆ ಮಾಡಿ ಅದು ಹ್ಯಂಗಿರಬಹುದು? ಯಾರು ಹಾಕಿ ಬೆಳದುದ್ರು ಅದನ್ನು ಹೇಳಿ ನೋಡನಾ? ಸಾಲು ಮರದ ತಿಮ್ಮಕ್ಕೋರೆ ಬೇರೆ, ನಾವೇ ಬೇರೆ ಹೌದ ಅಲ್ಲವಾ? ಮರದಿಂದ ಮರಕ್ಕೆ ನಗಿಯ ಮಂಗನಂಗಿದ್ದಿದ್ರೆ ಮನುಷ್ಯ ಚನ್ನಾಗಿರ್ತಿತ್ತು. ಯಾಕೇಳಿ? ಪರಿಸರ ಪ್ರಕೃತಿ ಅಚ್ಚುಕಟ್ಟಾಗಿರ್ತಿತ್ತು. ಕಳೆದ ವರ್ಷ ನೀವೆ ನೋಡಿದ್ರಲಾ, ಏನೇನಾಯ್ತು ಅಂತ. ಬೇಜಾರ ಮಾಡ್ಬೇಡಿ, ಯೋಚನೆ ಮಾಡಿ ಹೇಳಿ, ಒಂದಲ್ಲ ಹತ್ತ್ ಗಿಡ ಕೊಡ್ತೀನಿ...'

ಸೂರ್ಯ ಮರೆಯಾದ. ಆಲದಮರ ಸ್ಥಿತಪ್ರಜ್ಞನಂತೆ ನಿಂತಿದೆ. ಎಣಿಸಿ ಮುಗಿಸಲಾರದ ರೆಂಬೆಕೊಂಬೆಗಳು, ಕಣ್ಣು ತಂಪಾಗಿಸುವ ಹಸಿರೆಲೆ. ನಾವಿಬ್ಬರು ಕುಳಿತಲ್ಲಿಂದ ಎದ್ದೆವು. ಹಕ್ಕಿಗಳ ಚಿಲಿಪಿಲಿ ಶುರುವಾಯಿತು. ಹಳೆಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಕಗ್ಗದ ಸಾಲು ನಿತ್ಯದಂತೆ ನೆನಪಾಯಿತು. ಸುರಿಯುವ ಮರದೆಲೆ ಕಾಯಿಗಳನ್ನು ದಿನವಿಡೀ ಗುಡಿಸುವ ರಾಧಾ, ಧ್ಯಾನಮಂದಿರ ವರೆಸುವ ನಳಿನಿ ಮನೆಗೆ ಹೊರಟರು. 'ನಡಿಯಪ ನಾವು ಹೋಗನ' ಮಗಳ ಕೈಹಿಡಿದುಕೊಂಡೆ. ಗೇಟ್ ತೆಗೆದು ಪುನಾ ಹಾಕಿ ನನ್ನ ಬಾಲ್ಯದ ಗೆಳೆಯನ ಕಡೆಗೊಮ್ಮೆ ತಿರುಗಿ ನೋಡಿ. ನಾಳೆ ಬರುತ್ತೇನೆ ಅಂತ ಅವನಿಗೆ ಹೇಳಿದೆ.

'ಹೊರಟ್ರಾ? ಯೋಚನೆ ಮಾಡಿದ್ರಾ? ಗಿಡ ತಗಬರ್ಲಾ ನಾಳೆ?' ಸೆಕ್ಯುರಿಟಿಯಣ್ಣ ಓಡಿ ಬಂದರು. ನಾನು ಮಾತಾಡಲಿಲ್ಲ. 'ಗಿಡ ಕೊಡಿ ಅಂಕಲ್. ನಮ್ಮ ಸ್ಕೂಲಲ್ಲಿ ತುಂಬಾ ಜಾಗ ಇದೆ. ನಾನೇ ನೆಡ್ತೀನಿ. ನೀರಾಕಿ ಉಳ್ಸಿ ಬೆಳಸ್ತೀನಿ. ಆಮೇಲೆ ನನ್ನ ಜೂನಿಯರ್ಸ್ ಇರ್ತರಲ್ಲಾ, ತಮ್ಮ ತಂಗೀರು – ಅವ್ರು ನೀರಾಕಿ ಉಳ್ಸಿ ಬೆಳ್ಸತಾರೆ. ಆಮೇಲೆ ಅವ್ರ ತಮ್ಮ ತಂಗಿ ಇರ್ತಾರಲ್ಲ ಅವ್ರು ನೀರಾಕಿ ಉಳ್ಸಿ ಬೆಳಸ್ತಾರೆ. ನೀವೇನೂ ಯೋಚನೆ ಮಾಡ್ಬೇಡಿ, ಗಿಡ ಕೊಡಿ'.

ಮಗಳ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು. 'ನೋಡಿದ್ರಾ? ಅಕ್ಕರೇ, ಮಕ್ಕಳು ದೇವ್ರ ಸಮಾನ ಅನ್ನೋ ಮಾತು ಸತ್ಯ ಆಯ್ತುಲ' ಅಂದರು ಸೆಕ್ಯುರಿಟಿಯಣ್ಣ.

ಪ್ರತಿಕ್ರಿಯಿಸಿ: **feedback@sudha.co.in**